ನಮ್ಮ ನ್ಯೂಸ್ ಆ್ಯಪ್ ಅಮ್ಮ
udayavani.com

ಸಾಪ್ತಾಹಿಕ
# ಉದಯವಾಣಿ
ಜನಮನದ ಜೀವನಾಡಿ

BEST PRICE SHOP IN UDUPI
NAVRATAN ELECTRICALS
MANIPAL ROAD KADIYALI UDUPI
Wholesale & Retail Dealers for
Electricals | Plumbing & PVC Pipes | Lightings | Pump Sets | Winding Wires | Home Appliances | LED Panels | Geyser & Fans | Underground Cables | HT&LT Line Materials | Industrial Products
M: 9742282211, 9448144951

Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಸೆಪ್ಟೆಂಬರ್ 24, 2017

# ಸರಕಾರಿ ಕಾಲೇಜುಗಳಲ್ಲಿ ಸಿಸಿ ಕೆಮರಾ ಅಳವಡಿಕೆಗೆ ಅನುದಾನ ಕೊರತೆ

ಬೆಂಗಳೂರು, ಸೆ. 23: ಕಾಲೇಜಿನಲ್ಲಿ ಲಭ್ಯವಿರುವ ಅನುದಾನದಲ್ಲೇ ತರಗತಿಗಳಿಗೆ ಸಿಸಿ ಕೆಮರಾ ಅಳವಡಿಸಬೇಕು ಎಂದು ಸರಕಾರ ನಿರ್ದೇಶನ ನೀಡಿರುವುದರಿಂದ ಸರಕಾರಿ ಹಾಗೂ ಅನುದಾನಿತ ಪದವಿ ಕಾಲೇಜಿನ ಆಡಳಿತ ಮಂಡಳಿಗೆ ಹೊಸ ಪೀಕಲಾಟ ಆರಂಭವಾಗಿದೆ.

ಸಿಡಿಸಿ, ಆರ್‌ಆರ್ ಮತ್ತು ಸಿಡಿಎಫ್ ಅಥವಾ ಇನ್ನಿತರ ಅನುದಾನದಲ್ಲಿಯೇ ಸಿಸಿ ಕೆಮರಾ ಅಳವಡಿಸಿಕೊಳ್ಳಬೇಕು ಎಂದು ಹೇಳಿರುವುದು ಕಾಲೇಜು ಪ್ರಾಂಶುಪಾಲರಿಗೆ ಮತ್ತು ಆಡಳಿತ ಮಂಡಳಿಗೆ ನುಂಗಲಾರದ ತುತ್ತಾಗಿದ್ದು, ಕೆಲವೊಂದು ಕಾಲೇಜಿನಲ್ಲಿ ಪೀಠೋಪಕರಣವೇ ವ್ಯವಸ್ಥಿತವಾಗಿಲ್ಲ, ಹೀಗಿರುವಾಗ ಸಿಸಿ ಕೆಮರಾ ಅಳವಡಿಕೆ ಹೇಗೆ ಸಾಧ್ಯ?

ರಾಜ್ಯದ ಬಹುತೇಕ ಸರಕಾರಿ, ಅನುದಾನಿತ ಪದವಿ ಕಾಲೇಜಿನಲ್ಲಿ ಮೂಲ ಸೌಕರ್ಯ, ಪ್ರಯೋಗಾಲಯ, ವ್ಯವಸ್ಥಿತ ಕೊಠಡಿಗಳೇ ಇಲ್ಲ, ಇಂಥ ಸಂದರ್ಭದಲ್ಲಿ ಕಾಲೇಜು ಅನುದಾನದಲ್ಲಿ ಸಿಸಿ ಕೆಮರಾ ಅಳವಡಿಸಲು ಸಾಧ್ಯವೇ ಎಂಬ ಪ್ರಶ್ನೆ ಮೂಡಿದೆ.

ಪ್ರತಿ ತರಗತಿಗೂ ಸಿಸಿ ಕೆಮರಾ ಅಳವಡಿಸುವುದರಿಂದ ಕನಿಷ್ಠ 5ರಿಂದ 10 ಲಕ್ಷ ರೂ.ಗಳ ಆವಶ್ಯಕತೆ ಇದೆ. ಸರಕಾರದಿಂದ ಯಾವುದೇ ಅನುದಾನ ನೀಡುವುದಿಲ್ಲ, ಅನುದಾನದ ಲಭ್ಯತೆ ಇಲ್ಲದ ಕಾಲೇಜು ಆಡಳಿತ ಮಂಡಳಿ ಏನು ಮಾಡಬೇಕು ಎಂಬುದನ್ನು ಸ್ಪಷ್ಟಪಡಿಸಿಲ್ಲ, ಸಿಸಿ ಕೆಮರಾದ ರಕ್ಷಣೆ ಹೇಗೆ ಎಂಬುದರ ಬಗ್ಗೆಯೂ ಮಾಹಿತಿ ಇಲ್ಲ ಎಂದು ಸರಕಾರಿ ಕಾಲೇಜು ಪ್ರಾಂಶುಪಾಲರೊಬ್ಬರು ಹೇಳಿದ್ದಾರೆ.

**ಪ್ರಾಂಶುಪಾಲರ ವಿರುದ್ಧ ಕ್ರಮ**

ವಿಜ್ಞಾನ ತರಗತಿ ಹೊಂದಿರುವ ಸರಕಾರಿ ಮತ್ತು ಅನುದಾನಿತ ಪದವಿ ಕಾಲೇಜಿನಲ್ಲಿ ಪ್ರಯೋಗಾಲಯ ತರಗತಿಗೆ ಹಾಜರಾಗುವ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಕಡ್ಡಾಯವಾಗಿ ಪ್ರಯೋಗಾಲಯದ ಸಮವಸ್ತ್ರ ಧರಿಸಬೇಕು. ಪ್ರಯೋಗಾಲಯದ ಸಮವಸ್ತ್ರ ಧರಿಸದೇ ಇರುವುದು ಕಂಡು ಬಂದರೆ ಆಯಾ ಕಾಲೇಜಿನ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಇಲಾಖೆ ಎಚ್ಚರಿಸಿದೆ.

## ಸರಕಾರದ ಆದೇಶ

ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಸರಕಾರಿ ಹಾಗೂ ಅನುದಾನಿತ ಪದವಿ ಕಾಲೇಜಿನಲ್ಲಿ ಲಭ್ಯವಿರುವ ಅನುದಾನ ಬಳಸಿಕೊಂಡು ಒಂದು ತಿಂಗಳೊಳಗೆ ತರಗತಿಗೆ ಸಿಸಿ ಕೆಮರಾ ಅಳವಡಿಸುವಂತೆ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಿಸಿದೆ. ರಾಜ್ಯ ಮಹಿಳಾ ಆಯೋಗ ಮತ್ತು ಒಳಾಡಳಿತ ಇಲಾಖೆ ನೀಡಿರುವ ಸೂಚನೆಯಂತೆ ವಿದ್ಯಾರ್ಥಿಗಳ ಸುರಕ್ಷತೆಯ ಹಿತದೃಷ್ಟಿಯಿಂದ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಎಲ್ಲ ಸರಕಾರಿ, ಖಾಸಗಿ ಅನುದಾನಿತ ಪದವಿ ಕಾಲೇಜಿನ ತರಗತಿಗಳಿಗೆ ಆದ್ಯತೆ ಮೇರೆಗೆ ಒಂದು ತಿಂಗಳೊಳಗೆ ಕೆಪಿಟಿಟಿ ನಿಯಮದ ಪ್ರಕಾರ ಸಿಸಿ ಕೆಮರಾ ಅಳವಡಿಸಲು ಸುತ್ತೋಲೆ ಹೊರಡಿಸಿದೆ.

# ವಾರಕ್ಕೆ 40 ತಾಸು ಕಾರ್ಯಭಾರ ಕಡ್ಡಾಯ

## ಸರಕಾರಿ ಕಾಲೇಜು ಪ್ರಾಧ್ಯಾಪಕರಿಗೆ ಶಿಕ್ಷಣ ಇಲಾಖೆ ಸೂಚನೆ

ಬೆಂಗಳೂರು, ಸೆ. 23: ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರು ವಾರದಲ್ಲಿ 40 ತಾಸುಗಳ ಕಾರ್ಯಭಾರ ನಡೆಸಿ, ಅದನ್ನು ಕಡ್ಡಾಯವಾಗಿ ದಿನಚರಿ ಪುಸ್ತಕದಲ್ಲಿ ಬರೆಯಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆ ಸೂಚಿಸಿದೆ.

| ಕಾರ್ಯಭಾರ ವಿವರ | ಕಾರ್ಯಭಾರದ ವಿವರ (ಗಂಟೆಗಳಲ್ಲಿ) | |
|---|---|---|
| | ಪ್ರಾಯೋಗಿಕ ತರಗತಿ ಸಹಿತ | ಪ್ರಾಯೋಗಿಕ ತರಗತಿ ರಹಿತ |
| ನೇರ ಬೋಧನೆ | 20 | 16 |
| ಪರೀಕ್ಷೆ | 2 | 2 |
| ಟ್ಯುಟೋರಿಯಲ್ | 4 | 4 |
| ತಯಾರಿ | 8 | 10 |
| ಪಠ್ಯೇತರ ಚಟುವಟಿಕೆ | 4 | 4 |
| ಪ್ರಾಂಶುಪಾಲರಿಗೆ ಸಹಾಯ | 2 | 4 |

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮದಂತೆ ಸರಕಾರಿ ಪದವಿ ಕಾಲೇಜಿನ ಬೋಧಕರು ವಾರಕ್ಕೆ 40 ತಾಸುಗಳ ಕಾರ್ಯಭಾರ ಮಾಡಬೇಕು. ಆದರೆ, ಪ್ರಾಧ್ಯಾಪಕರು, ಸಹ ಮತ್ತು ಸಹಾಯಕ ಪ್ರಾಧ್ಯಾಪಕರು ನೇರ ಬೋಧನೆ ಮತ್ತು ಪ್ರಾಯೋಗಿಕ ತರಗತಿ ಹೊರತುಪಡಿಸಿ ಬೇರೆ ಯಾವುದೇ ಕಾರ್ಯಭಾರ ನಿರ್ವಹಿಸುತ್ತಿಲ್ಲ ಹಾಗೂ ಅದನ್ನು ಕಾಲೇಜಿನ ವೇಳಾಪಟ್ಟಿ ಉಪನ್ಯಾಸಕರ ದಿನಚರಿಯಲ್ಲಿ ನಮೂದಿಸುತ್ತಿಲ್ಲ ಎಂಬುದರ ಬಗ್ಗೆ ವಿದ್ಯಾರ್ಥಿಗಳಿಂದ ದೂರು ಬಂದಿದೆ. ಜತೆಗೆ ಪ್ರಾಧ್ಯಾಪಕರು, ಸಹ ಮತ್ತು ಸಹಾಯಕ ಪ್ರಾಧ್ಯಾಪಕರು ಮನೆಪಾಠ (ಟ್ಯುಟೋರಿಯಲ್) ನಡೆಸುತ್ತಿರುವ ಬಗ್ಗೆ ಇಲಾಖೆಯ ಅಧಿಕಾರಿಗಳು ಕಾಲೇಜು ತಪಾಸಣೆ ನಡೆಸಿದ ಸಂದರ್ಭದಲ್ಲಿ ತಿಳಿದುಬಂದಿದೆ.

ಹೀಗಾಗಿ, ಇಲಾಖೆಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರು, ಸಹಾಯಕ ಮತ್ತು ಸಹ ಪ್ರಾಧ್ಯಾಪಕರು ತಮ್ಮ ದಿನಚರಿಯಲ್ಲಿ ಕಡ್ಡಾಯವಾಗಿ 40 ತಾಸುಗಳ ಕಾರ್ಯಭಾರವನ್ನು ನಮೂದಿಸಬೇಕು. ಉಪನ್ಯಾಸಕರು ತೆಗೆದುಕೊಳ್ಳುವ ಟ್ಯುಟೋರಿಯಲ್ ತರಗತಿಗಳ ವಿವರಗಳನ್ನು ಕಾಲೇಜಿನ ವೇಳಾಪಟ್ಟಿ ಹಾಗೂ ಉಪನ್ಯಾಸಕರ ವೈಯಕ್ತಿಕ ವೇಳಾಪಟ್ಟಿಯಲ್ಲಿ ಕಡ್ಡಾಯವಾಗಿ ದಾಖಲಿಸಿಕೊಂಡಿರಬೇಕು. ಈ ಬಗ್ಗೆ ವಿದ್ಯಾರ್ಥಿಗಳಿಗೆ ಮುನ್ಸೂಚನೆ ನೀಡಲು ಮಾಹಿತಿಯನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಬೇಕು ಎಂದು ನಿರ್ದೇಶಿಸಿದೆ.

ನಮ್ಮ ನ್ಯೂಸ್ ಆ್ಯಪ್ ಅನ್ನು
udayavani.com



ಸಾಪ್ತಾಹಿಕ
ಉದಯವಾಣಿ
ಜನಮನದ ಜೀವನಾಡಿ
Regd.No.UDP/1259/2015-17 : udayavani.com : UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಸೆಪ್ಟೆಂಬರ್ 24, 2017



BEST PRICE SHOP IN UDUPI
New NAVRATAN ELECTRICALS
MANIPAL ROAD KADIYALI UDUPI
Wholesale & Retail Dealers for
Electricals | Plumbing & PVC Pipes | Lightings | Pump Sets | Winding Wires | Home Appliances | LED Panels | Geyser & Fans | Underground Cables | HT&LT Line Materials | Industrial Products
M: 9742282211, 9448144951


# ವಾರಕ್ಕೆ 40 ತಾಸು ಕಾರ್ಯಭಾರ ಕಡ್ಡಾಯ

## ಸರಕಾರಿ ಕಾಲೇಜು ಪ್ರಾಧ್ಯಾಪಕರಿಗೆ ಶಿಕ್ಷಣ ಇಲಾಖೆ ಸೂಚನೆ

ಬೆಂಗಳೂರು, ಸೆ. 23: ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಪ್ರಾಧ್ಯಾಪಕರು ವಾರದಲ್ಲಿ 40 ತಾಸುಗಳ ಕಾರ್ಯಭಾರ ನಡೆಸಿ, ಅದನ್ನು ಕಡ್ಡಾಯವಾಗಿ ದಿನಚರಿ ಪುಸ್ತಕದಲ್ಲಿ ಬರೆಯಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆ ಸೂಚಿಸಿದೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮದಂತೆ ಸರಕಾರಿ ಪದವಿ ಕಾಲೇಜಿನ ಬೋಧಕರು ವಾರಕ್ಕೆ 40 ತಾಸುಗಳ ಕಾರ್ಯಭಾರ ಮಾಡಬೇಕು. ಆದರೆ, ಪ್ರಾಧ್ಯಾಪಕರು, ಸಹ ಮತ್ತು ಸಹಾಯಕ ಪ್ರಾಧ್ಯಾಪಕರು ನೇರ ಬೋಧನೆ ಮತ್ತು ಪ್ರಾಯೋಗಿಕ ತರಗತಿ ಹೊರತುಪಡಿಸಿ ಬೇರೆ ಯಾವುದೇ ಕಾರ್ಯಭಾರ ನಿರ್ವಹಿಸುತ್ತಿಲ್ಲ ಹಾಗೂ ಅದನ್ನು ಕಾಲೇಜಿನ ವೇಳಾಪಟ್ಟಿ, ಉಪನ್ಯಾಸಕರ ದಿನಚರಿಯಲ್ಲಿ ನಮೂದಿಸುತ್ತಿಲ್ಲ ಎಂಬುದರ ಬಗ್ಗೆ ವಿದ್ಯಾರ್ಥಿಗಳಿಂದ ದೂರು ಬಂದಿದೆ. ಜತೆಗೆ ಪ್ರಾಧ್ಯಾಪಕರು, ಸಹ ಮತ್ತು ಸಹಾಯಕ ಪ್ರಾಧ್ಯಾಪಕರು ಮನೆಪಾಠ (ಟ್ಯುಟೋರಿಯಲ್) ನಡೆಸುತ್ತಿರುವ ಬಗ್ಗೆ ಇಲಾಖೆಯ ಅಧಿಕಾರಿಗಳು ಕಾಲೇಜು ತಪಾಸಣೆ ನಡೆಸಿದ ಸಂದರ್ಭದಲ್ಲಿ ತಿಳಿದುಬಂದಿದೆ.

| ಕಾರ್ಯಭಾರ ವಿವರ | ಕಾರ್ಯಭಾರದ ವಿವರ (ಗಂಟೆಗಳಲ್ಲಿ) | |
|---|---|---|
| | ಪ್ರಾಯೋಗಿಕ ತರಗತಿ ಸಹಿತ | ಪ್ರಾಯೋಗಿಕ ತರಗತಿ ರಹಿತ |
| ನೇರ ಬೋಧನೆ | 20 | 16 |
| ಪರೀಕ್ಷೆ | 2 | 2 |
| ಟ್ಯುಟೋರಿಯಲ್ | 4 | 4 |
| ತಯಾರಿ | 8 | 10 |
| ಪಠ್ಯೇತರ ಚಟುವಟಿಕೆ | 4 | 4 |
| ಪ್ರಾಂಶುಪಾಲರಿಗೆ ಸಹಾಯ | 2 | 4 |

ಹೀಗಾಗಿ, ಇಲಾಖೆಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರು, ಸಹಾಯಕ ಮತ್ತು ಸಹ ಪ್ರಾಧ್ಯಾಪಕರು ತಮ್ಮ ದಿನಚರಿಯಲ್ಲಿ ಕಡ್ಡಾಯವಾಗಿ 40 ತಾಸುಗಳ ಕಾರ್ಯಭಾರವನ್ನು ನಮೂದಿಸಬೇಕು. ಉಪನ್ಯಾಸಕರು ತೆಗೆದುಕೊಳ್ಳುವ ಟ್ಯುಟೋರಿಯಲ್ ತರಗತಿಗಳ ವಿವರಗಳನ್ನು ಕಾಲೇಜಿನ ವೇಳಾಪಟ್ಟಿ ಹಾಗೂ ಉಪನ್ಯಾಸಕರ ವೈಯಕ್ತಿಕ ವೇಳಾಪಟ್ಟಿಯಲ್ಲಿ ಕಡ್ಡಾಯವಾಗಿ ದಾಖಲಿಸಿಕೊಂಡಿರಬೇಕು. ಈ ಬಗ್ಗೆ ವಿದ್ಯಾರ್ಥಿಗಳಿಗೆ ಮುನ್ಸೂಚನೆ ನೀಡಲು ಮಾಹಿತಿಯನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಬೇಕು ಎಂದು ನಿರ್ದೇಶಿಸಿದೆ.